

ನಾಣಿ: ಲೋ ಗುಂಡ ನೀನು ನಿನ್ನ ಪ್ರೇಯಸಿಗೆ ನೂರಾರು ಪ್ರೇಮ ಪತ್ರಗಳನ್ನು ಬರೆದರೂ ಅವಳು ನಿನಗೆ ಕೈಕೊಟ್ಟು ಓಡಿ ಹೋದಳಂತೆ ಹೌದಾ?

ಗುಂಡ: ಹೌದಯ್ಯಾ! ಆದರೂ ಅದರಿಂದ ನನಗೊಂದು ಲಾಭವಾಗಿದೆ!

ನಾಣಿ: ಏನಯ್ಯ ಅದು?

ಗುಂಡ: ನನ್ನ ಹ್ಯಾಂಡ್ ರೈಟಿಂಗ್ ಇಂಪ್ರೂವ್ ಆಯಿತು!

★★★

ಗುಂಡ: ನಿಮ್ಮನೇಗೆ ಆಗಾಗ ಒಬ್ಬ ಬರ್‍ತಾ ಇರ್‍ತಾನಲ್ಲ, ರಾಂಕಿ ಅಂತ! ಅವನು ನಿನಗೆ ಸಂಬಂಧಿಯಂತೆ ಹೌದಾ?

ನಾಣಿ: ಹಾಗಂತ ಹೇಳಿದ್ದು ಆ ಹುಚ್ಚ ತಾನೆ?

ಗುಂಡ: ಹಾಗಾದ್ರೆ ಅವನು ಹೇಳಿದ್ದು ಸರಿ ಅಂತ ಆಯ್ತು, ಬಿಡು!

ಸಂಗ್ರಹ: ಎಂ.ಕೆ.ಮಂಜುನಾಥ್

## ಇಬ್ಬರೂ

ನ್ಯಾಯಾಧೀಶರು: ಪುನಃ ನನ್ನೆದುರಿಗೆ ಬಂದೆಯಾ?

ಆರೋಪಿ: ಇಬ್ಬರು ಪೊಲೀಸರು ನನ್ನನ್ನು ಇಲ್ಲಿಗೆ ಎಳೆದು ತಂದಿದ್ದಾರೆ.

ನ್ಯಾಯಾಧೀಶರು: ತುಂಬಾ ಕುಡಿದಿರಬೇಕಲ್ಲವೇ?

ಆರೋಪಿ: ಹೌದು ಇಬ್ಬರೂ.

★★★



## ಸೋಡಾ ಬೇಡ!

ಚಹಾ ಕುಡಿಯುವಿರಾ?
ಚಹಾ ಬೇಡ
ಕಾಫಿ ಕುಡಿಯಿರಿ
ಕಾಫಿ ಬೇಡ
ಶರಬತ್ ತರಿಸಲೇ?
ಶರಬತ್ ಬೇಡ
ವಿಸ್ಕಿ ಮತ್ತು ಸೋಡಾ?
ಸೋಡಾ ಬೇಡ!

ಸಂಗ್ರಹ: ಸೋಮನಾಥ ಎಸ್.ಕರ್ಕೇರ


